ನೀರಾವರಿ ಯೋಜನೆಗಳು

4090(4447); ಶ್ರೀ ಸಿ.ಎನ್. ಬಾಲಕೃಷ್ಣ

ಅ) ಹಾಸನ ಜಿಲ್ಲೆಗೆ ಕಳೆದ ಮೂರು ವರ್ಷಗಳಲ್ಲಿ ಮಂಜೂರು ಮಾಡಿದ ಭಾರೀ ಮತ್ತು ಮಧ್ಯಮ ನೀರಾವರಿ ಯೋಜನಾ ಸೌಲಭ್ಯದಡಿಯಲ್ಲಿನ ಯೋಜನೆಗಳ ವಿವರಗಳು ಹಾಗೂ ಅದಕ್ಕಾಗಿ ನಿಗದಿಪಡಿಸಿರುವ ಅನುದಾನದ ಮೊತ್ತ ಎಷ್ಟು (ವಿವರ ನೀಡುವುದು)

ಆ) ಭಾರೀ ಮತ್ತು ಮಧ್ಯಮ ನೀರಾವರಿ ಯೋಜನೆಗಳಡಿಯಲ್ಲಿ ಮಂಜೂರಾದ ಹೊಸ ಯೋಜನೆಗಳು, ಪೂರ್ಣಗೊಂಡ ಹಾಗೂ ನಡೆಯುತ್ತಿರುವ ಕಾಮಗಾರಿಗಳ ವಿವರ ಒದಗಿಸುವುದು.

ಇ) ಭಾರೀ ಮತ್ತು ಮಧ್ಯಮ ನೀರಾವರಿ ಅಭಿವೃದ್ಧಿಯ ಕುರಿತಾಗಿ ಮತ್ತು ಮುಂದೆ ಹಮ್ಮಿಕೊಳ್ಳಬಹುದಾದ ಯೋಜನೆಗಳ ಕುರಿತು ಸರ್ಕಾರದ ಕ್ರಿಯಾ ಯೋಜನೆಗಳನ್ನು ಸಿದ್ಧಪಡಿಸಿದೆಯೇ; ಹಾಗಿದ್ದಲ್ಲಿ, ವಿವರ ಒದಗಿಸುವುದು?

ಶ್ರೀ ಎಂ.ಬಿ. ಪಾಟೀಲ್ (ಜಲಸಂಪನ್ಮೂಲ ಸಚಿವರು)

ಅ) ಹಾಸನ ಜಿಲ್ಲೆಗೆ ಸಂಬಂಧಿಸಿದಂತೆ ಕಳೆದ ಮೂರು ವರ್ಷಗಳಲ್ಲಿ ಭಾರೀ ಮತ್ತು ಮಧ್ಯಮ ನೀರಾವರಿ ಯೋಜನಾ ಸೌಲಭ್ಯದಡಿಯಲ್ಲಿ ಈ ಕೆಳಕಂಡ ಕುಡಿಯುವ ನೀರಿನ ಯೋಜನೆಗಳು ಮಂಜೂರಾಗಿದ್ದು, ಕಾವೇರಿ ನೀರಾವರಿ ನಿಗಮದಲ್ಲಿ ಪ್ರಗತಿಯಲ್ಲಿವೆ :

ಕ್ರ ಸಂ.	ಕುಡಿಯುವ ನೀರಿನ ಯೋಜನೆ ಹೆಸರು	2014–15 ನೇ ಸಾಲಿಗೆ ಅನುದಾನ (ಕೋಟಿಗಳಲ್ಲಿ)
1	ನುಗ್ಗೇಹಳ್ಳಿ	3.00
2	ಹಳೇಬೀಡು–ಮಾದಿಹಳ್ಳಿ	3.00
3	ಅರಕಲಗೂಡು	5.00

ವಿವರಗಳನ್ನು ಅನುಬಂಧ–1 ರಲ್ಲಿ ಲಗತ್ತಿಸಿದೆ

ಹಿರಿಸಾವೆ–ಶ್ರವಣಬೆಳಗೊಳ ಕುಡಿಯುವ ನೀರು ಯೋಜನೆಯ ಅಂದಾಜು ಪಟ್ಟಿಯನ್ನು ತಯಾರಿಸಿದ್ದು, ಕಾವೇರಿ ನೀರಾವರಿ ನಿಗಮದಲ್ಲಿ ಪರಿಶೀಲನಾ ಹಂತದಲ್ಲಿದೆ.

ಆ) ಹಾಸನ ಜಿಲ್ಲೆಗೆ ಸಂಬಂಧಿಸಿದಂತೆ ಕಾವೇರಿ ನೀರಾವರಿ ನಿಗಮದ ವ್ಯಾಪ್ತಿಯಲ್ಲಿನ ಭಾರೀ ಮತ್ತು ಮಧ್ಯಮ ನೀರಾವರಿ ಯೋಜನೆಗಳಡಿಯಲ್ಲಿನ ನೀರಾವರಿ ಯೋಜನೆಗಳ ವಿವರ ಈ ಕೆಳಕಂಡಂತಿವೆ :

1. ಮಂಜೂರಾದ ಹೊಸ ಯೋಜನೆಗಳು – 0
2. ಪೂರ್ಣಗೊಂಡ ಯೋಜನೆಗಳು – 4
3. ಪ್ರಗತಿಯಲ್ಲಿರುವ ಯೋಜನೆಗಳು – 5

ವಿವರಗಳನ್ನು **ಅನುಬಂಧ–2** ರಲ್ಲಿ ಲಗತ್ತಿಸಿದೆ.

ಇ) ಯಾವುದೇ ಕ್ರಿಯಾ ಯೋಜನೆಯನ್ನು ಕಾವೇರಿ ನೀರಾವರಿ ನಿಗಮದಲ್ಲಿ ಸಿದ್ಧಪಡಿಸಿರುವುದಿಲ್ಲ.

ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ. ಸಿ.ಎನ್.ಬಾಲಕೃಷ್ಣ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:4447 ಕ್ಕೆ ಅನುಬಂಧ–1

ಹಾಸನ ಜಿಲ್ಲೆಗೆ ಸಂಬಂಧಿಸಿದಂತೆ ಭಾರೀ ಮತ್ತು ಮಧ್ಯಮ ನೀರಾವರಿ ಯೋಜನಾ ಸೌಲಭ್ಯದಡಿಯಲ್ಲಿ ಮಂಜೂರಾಗಿರುವ ಕುಡಿಯುವ ನೀರಿನ ಯೋಜನೆಗಳ ವಿವರಗಳು

(ರೂ. ಕೋಟಿಗಳಲ್ಲಿ)

ಕ್ರ ಸಂ	ಕುಡಿಯುವ ನೀರಿನ ಯೋಜನೆಯ ಹೆಸರು	ಅಂದಾಜು ಮೊತ್ತ	ತುಂಬಿಸುವ ಕೆರೆಗಳ ಸಂಖ್ಯೆ	ಪ್ರಯೋಜನ ಪಡೆಯುವ ಗ್ರಾಮಗಳು	ನೀರಿನ ಪ್ರಮಾಣ (ಎಂ.ಸಿ.ಎಫ್.ಟಿ)	ಜೂನ್ 2014ರ ಅಂತ್ಯದವರೆಗಿನ ವೆಚ್ಚ	ಯೋಜನೆಯ ಹಂತ
1	ನುಗ್ಗೇಹಳ್ಳಿ	17.60	11	15	171.00	1.87	ಪ್ರಗತಿಯಲ್ಲಿದೆ
2	ಹಳೇಬೀಡು–ಮಾದಿಹಳ್ಳಿ	9.00	39	26	220.00	8.40	ಪ್ರಗತಿಯಲ್ಲಿದೆ
3	ಅರಕಲಗೂಡು	28.00	88	42	87.10	--	ಟೆಂಡರ್ ಕರೆಯಲಾಗಿದೆ

(ಎನ್.ಆರ್.ವಿಜಯಸಾರಥಿ)
ವಿಶೇಷ ಕರ್ತವ್ಯಾಧಿಕಾರಿ(ತಾಂತ್ರಿಕ, ಎಂಎಂಐ–3),
ಜಲ ಸಂಪನ್ಮೂಲ ಇಲಾಖೆ.

ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಸಿ.ಎನ್.ಬಾಲಕೃಷ್ಣ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 4447 ಕ್ಕೆ ಅನುಬಂಧ–2

ಶಾಸನ ಜಲ್ಲಿಗೆ ಸಂಬಂಧಿಸಿದಂತೆ ಹಾರೀ ಮತ್ತು ಹಿನ್ನೀರು ನೀರಾವರಿ ಯೋಜನಾ ಪೌಲಭ್ಯದಡಿಯಲ್ಲಿ ಮಂಜೂರಾಗಿರುವ ಯೋಜನೆಗಳ ವಿವರಗಳು

(ರೂ. ಕೋಟಿಗಳಲ್ಲಿ)

ಕ್ರ ಸಂ	ಯೋಜನೆಯ ಹೆಸರು	ಅಂದಾಜು ಮೊತ್ತ	ಜೂನ್ 2014 ರವರೆಗೆ ಸಾಧಿಸಿದ ಪ್ರಗತಿ	ಸೃಷ್ಟಿಸಿದ ನೀರಾವರಿ ಸಾಮರ್ಥ್ಯ (ಹೆ.)	2014–15ನೇ ಸಾಲಿಗೆ ನೀಡಿರುವ ಅನುದಾನ	2014–15ನೇ ಸಾಲಿನಲ್ಲಿ ಸಾಧಿಸಲು ಉದ್ದೇಶಿಸಿರುವ ನೀರಾವರಿ ಸಾಮರ್ಥ್ಯ (ಹೆ.)	ಯೋಜನೆಯ ಹಂತ
ಪೂರ್ಣಗೊಂಡ ಯೋಜನೆಗಳು							
1	ಮಾಕನಹಳ್ಳಿ ಏ.ನೀ.ಯೋಜನೆ	50.00	56.43	3360.00	1.50	–	ಭೌತಿಕವಾಗಿ ಪೂರ್ಣಗೊಂಡಿದೆ
2	ಕಾಮಸಮುದ್ರ ಏ.ನೀ.ಯೋಜನೆ	70.00	62.50	3682.00	2.50	–	ಸರ್ಕಾರದ ಆದೇಶದಂತೆ 1 ಮತ್ತು 2ನೇ ಹಂತ ಭೌತಿಕವಾಗಿ ಪೂರ್ಣಗೊಂಡಿದೆ
3	ಮಳಲೂರು ಏ.ನೀ.ಯೋಜನೆ.	2.68	2.24	485.00	1.10	–	ಭೌತಿಕವಾಗಿ ಪೂರ್ಣಗೊಂಡಿದೆ
4	ಪಾಪಾಗ್ನಿ ಯೋಜನೆ	59.75	64.73	7487.00	1.10	–	ಭೌತಿಕವಾಗಿ ಪೂರ್ಣಗೊಂಡಿದೆ
ಪ್ರಗತಿಯಲ್ಲಿರುವ ಯೋಜನೆಗಳು							
1	ಹೇಮಾವತಿ ಯೋಜನೆ (ಗೊರೂರು ಹಾಗೂ ತುಮಕೂರು ವಲಯ ಸೇರಿ)	3877.00	3396.62	24800.00	46.80	3008.00	ಪ್ರಗತಿಯಲ್ಲಿದೆ (ಗೊರೂರು ವಲಯದ ಕಾಮಗಾರಿಗಳು ಪೂರ್ಣಗೊಂಡಿದ್ದು, ತುಮಕೂರು ವಲಯದ ಕಾಮಗಾರಿಗಳು ಪ್ರಗತಿಯಲ್ಲಿವೆ.
2	ಯಗಚಿ ಯೋಜನೆ	440.00	440.49	11870.00	19.80	400.00	ಪ್ರಗತಿಯಲ್ಲಿದೆ
3	ಕಾವೇನಹಳ್ಳಿ ಯೋಜನೆ	176.56	64.92	1074.00	4.60	1000.00	ಪ್ರಗತಿಯಲ್ಲಿದೆ
4	ಹ್ಯಾವನಹಳ್ಳಿ ಏ.ನೀ.ಯೋಜನೆ	45.30	14.94	777.00	2.50	1515.00	ಪ್ರಗತಿಯಲ್ಲಿದೆ
5	ಆಂಜನೇಯಪುರ ಏ.ನೀ.ಯೋಜನೆ	10.05	4.77	–	–	–	ಯೋಜನೆಯ ಸ್ವರೂಪ ಬದಲಾಗಿದ್ದು, ಅದರನ್ವಯ ಆಂದಾಜನ್ನು ಮಾರ್ಪಡಿಸಬೇಕಾಗಿದೆ.

(ಎನ್.ಆರ್.ವಿಜಯಸಾರಥಿ)
ವಿಶೇಷ ಕರ್ತವ್ಯಾಧಿಕಾರಿ(ಶಾಂತ್ರಿಕ, ಎಂಎಡಿಬಿ–3),
ಜಲ ಸಂಪನ್ಮೂಲ ಇಲಾಖೆ.